ಮಲ್ಲಿಕಾರ್ಜುನ ಗಚ್ಚಿ, ಗೋಗಿ
*ಕಾಗೆ ಒಂದಗುಳು ಕಂಡರೆ ಕರೆವುದು ತನ್ನ ಬಳಗವೆಲ್ಲಾ; ಆದರೆ ಮಾನವ ಅದರಿಂದಲೂ ಕಲಿಯಲಿಲ್ಲವಲ್ಲ?*



ಕಾಗೆ ಸಂಪಾದಿಸಲಿಲ್ಲ, ಬೇಯಿಸಲಿಲ್ಲ; ತೆರಿಗೆ ಕಟ್ಟಲಿಲ್ಲ; ಬಿಟ್ಟಿ ಊಟಕ್ಕೆ ಬಳಗ ಕರೆಯುವುದು ದುಷ್ಟತನವು ಎಂದನಾ ಅಲ್ಲಜ್ಞ.

ಅನು, ಹಾಸನ
*ಕೆಲಸಕ್ಕೆ ಹೋಗುವ ತಾಯಿ ಒಳ್ಳೆಯ ತಾಯಿ ಆಗಲು ಸಾಧ್ಯವಿಲ್ಲವೆ?*
ಮನೆಯವರ ನಡೆ, ನುಡಿಗಳಲ್ಲಿ ಖಾರ ಇದ್ದರೆ ಸಾಧ್ಯವಿಲ್ಲ; ಸಹಕಾರ ಇದ್ದರೆ ಸಾಧ್ಯ.

ಎಸ್.ಜಿ. ಕರನಂದಿ, ಹುನಗುಂದ
*ಜನನ, ಮರಣಗಳ ಮಧ್ಯೆ ಚಿರವಾಗಿ ಯಾವುದು ನಿಲ್ಲುತ್ತದೆ?*
ಬರ್ತ್ ಸರ್ಟಿಫಿಕೇಟ್, ಆಧಾರ್ ಕಾರ್ಡ್.

ಎಂ.ಸಿ. ಅರುಣ್‌ಕುಮಾರ್, ಮೈಸೂರು
*ಹಾಸಿಗೆ ಇರುವುದು ಅನುಕೂಲಸ್ಥರ ಮನೆಯಲ್ಲಿ. ಆದ್ದರಿಂದ "ಚಾಪೆ ಇದ್ದಷ್ಟು ಕಾಲು ಚಾಚು" ಎನ್ನಬಹುದಿತ್ತಲ್ಲವೆ?*




‘ಹೊದಿಕೆ ಇದ್ದಷ್ಟು ಕಾಲು ಚಾಚು’ ಎನ್ನಬಹುದು. ಹೊದಿಕೆಯಿಂದ ಕಾಲು ಹೊರಬಂದರೆ ಸೊಳ್ಳೆ ಕಚ್ಚತ್ತೆ.

ಎಸ್.ಸಿ. ರಮೇಶ್, ಮೈಸೂರು
*ನಿಮ್ಮನ್ನು ರೋಲ್ ಮಾಡೆಲ್ ಆಗಿ ಸ್ವೀಕರಿಸಬೇಕೆನಿಸಿದೆ. ಆದರೆ ನಿಮ್ಮ ಬಗ್ಗೆ ಏನೂ ಗೊತ್ತಿಲ್ಲವಲ್ಲ...?*
ಕ್ವಿಕ್! ಈಗಲೇ ಎಲ್ಲ ಒಳಿತುಗಳ ಆಗರವಾಗಿ ನನ್ನನ್ನು ಸ್ವೀಕರಿಸಿಬಿಡಿ; ನನ್ನ ಬಗ್ಗೆ ಗೊತ್ತಾದಮೇಲೆ ಅದು ಸಾಧ್ಯವಿಲ್ಲ.

ಎಚ್.ಆರ್. ದೇಸಾಯಿ, ರಾಯಚೂರು
*ಬ್ರಹ್ಮ ಬರೆದ ನಮ್ಮ ಹಣೆಬರಹವನ್ನು ನಮಗೆ ಬೇಕಾದಂತೆ ತಿದ್ದಿಕೊಂಡರೆ ಬ್ರಹ್ಮ ನಮಗೆ ಶಾಪ ಕೊಡುತ್ತಾನಾ?*
ಶಾಪದ ಮಾತಿರಲಿ, ಮೊದಲಿಗೆ ಅದನ್ನು ತಿದ್ದಲು ಬೇಕಾದ ಪೆನ್ನನ್ನೇ ಕೊಡುವುದಿಲ್ಲ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಸತ್ತವರೆಲ್ಲರೂ ಮತ್ತೆ ಬದುಕಿ ಬರುವಂತಿದ್ದರೆ?*
ಕೂಡಲೆ ಮತ್ತೆ ಸಾಯಿಸಲು ಶ್ಮಶಾನಗಳಲ್ಲಿ ವ್ಯವಸ್ಥೆ ಮಾಡಲಾಗುತ್ತಿತ್ತು.

ಬಿ.ಎಂ. ಶಿವಲಿಂಗೇಗೌಡ, ಬೇವಿನಹಳ್ಳಿ
*ಕರುಣೆ, ಪ್ರೀತಿ, ಸಹನೆ ತುಂಬಾ ಇರುವುದು ಸ್ತ್ರೀಯರಲ್ಲೋ, ಪುರುಷರಲ್ಲೋ?*
ಅದು ವ್ಯಕ್ತಿಗೆ ಸಂಬಂಧಿಸಿದ್ದಲ್ಲ, ಕರುಳಿಗೆ; ಹೆಂಗರುಳು ಇದ್ದಲ್ಲಿ ಮಾತ್ರ ಇವಕ್ಕೆ ಎಂಟ್ರಿ.

ಎಂ.ಜಿ. ರಾಮಚಂದ್ರ, ಮಂಡಗಳಲೆ
*ಸಾಮಾನ್ಯವಾಗಿ ‘ಬೇಕು’ಗಳಿಗೆ ‘ಹೆಂಡತಿ’ ಅನ್ವರ್ಥನಾಮವೇ ಎಂಬುದು ನನ್ನ ಅಭಿಪ್ರಾಯ. ತಾವೇನಂತೀರಾ?*
ಇರಬಹುದು. ಆದರೆ ಅವಳ ಬೇಕುಗಳಿಗೆಲ್ಲ ಪರ್ಮನೆಂಟ್ 'ನಾಮ'ವೇ ಗಂಡ!

ಟಿ.ಎಂ. ಮಾನಪ್ಪ, ಶಿವಮೊಗ್ಗ
*ಇಲ್ಲೊಬ್ಬ ನಿಂಬೆಹಣ್ಣಿನಂಥ ಹುಡುಗಿ ಬಂದಳು ಅಂತಾನಲ್ಲಾ...?*
ಅವನ ಮುಖ ನೋಡಿದಾಗಲೆಲ್ಲ ಅವಳು ಮುಖ ಹುಳ್ಳಹುಳ್ಳಗೆ ಮಾಡಿಕೊಳ್ಳುತ್ತಾಳಂತೆ.

ಡೈರಿ ವಿಶ್ವನಾಥ್, ಬೆಂಗಳೂರು
*ನಿಮ್ಮ ಟೂತ್‌ಪೇಸ್ಟಲ್ಲಿ ಏನಿದೆ?*
ಗೊತ್ತಾಗ್ಲೋಯ್ತು.....! ಮರೆತು ಓಪನ್ ಮಾಡಿಟ್ಟಿದ್ದೆ.... ಬರೀ ವಾಸನೆ ಇರುವೆಗಳು!

ಕುಮಾರ ಚಲವಾದಿ, ಹೋಳೆನರಸಿಪುರ
*ಸತ್ಯ ಹೇಳಿದ್ದರಿಂದ ಜೀವನವೆಲ್ಲ ಗೋಳಾಡಿ ಕೊನೆಯಲ್ಲಿ ರಾಜ್ಯ, ಕೋಶ ಪಡೆದ ಸತ್ಯ ಹರಿಶ್ಚಂದ್ರ ಸಾಧಿಸಿದ್ದೇನು?*
ಪಾಪ್ಯುಲಾರಿಟಿ.

ಎಂ.ಎ. ಕುಮಾರ್, ಬೆಂಗಳೂರು
*ಹುಟ್ಟಿನಿಂದ ಕೊನೆಯವರೆಗೂ ಮನುಷ್ಯನ ಯಾವ ಅಂಗ ಚೈತನ್ಯದಿಂದ ಕೂಡಿರುತ್ತದೆ?*
ಮೂಗು. ಅಲ್ಲಿಂದಲೇ ಮೊದಲ ಉಸಿರು; ಅಲ್ಲಿಂದಲೇ ಕೊನೆಯ ಉಸಿರು.

## ಬಹುಮಾನಿತ ಪ್ರಶ್ನೆ

ಜಾಕೋಬ್ ಡಿಸೋಜ, ಕುರುವಳ್ಳಿ
*ಮರ್ಯಾದೆ ಮತ್ತು ಹಣ; ಇವೆರಡೂ ಇಲ್ಲದಿದ್ರೆ ಏನಾಗುತ್ತೆ?*
ಪರ್ಮನೆಂಟ್ ಮನೆ ಅಳಿಯನಾಗುವ ಯೋಗ!

ಕೃಷ್ಣಮೂರ್ತಿ ಎಸ್., ಬೆಂಗಳೂರು
*ಇಲ್ಲೊಬ್ಬಳು ಪ್ರತಿದಿನವೂ ಮಲ್ಲಿಗೆ ಹೂ ಮುಡಿದುಬಂದು ಮತ್ತೇರಿಸುತ್ತಿದ್ದಾಳಲ್ಲಾ, ಏನು ಮಾಡಲಿ?*
ಕೊರೆಯುವ ಚಳಿಯಲ್ಲಿ ತಣ್ಣೀರಿನ ಸ್ನಾನ ಮಾಡಿ. ನೆಗಡಿಯಾಗಿ ಶ್ರೀಗಂಧವೇ ಸುಳಿದರೂ ತಿಳಿಯುವುದಿಲ್ಲ.

ಬಾಲಕ, ಬೀದರ್
*ಸರ್ಕಾರ ಪೂರ್ತಿ ಕಳ್ಳರಿಂದ ಕೂಡಿದೆಯಂತೆ...?*
ಶುದ್ಧ ಸುಳ್ಳು. ಲೂಟಿಕೋರರು, ನಯವಂಚಕರು, ಅತ್ಯಾಚಾರಿಗಳು ಸಹ ಇದ್ದಾರೆ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
*ಭವಿಷ್ಯಶಾಸ್ತ್ರವನ್ನು, ವಾಸ್ತುಶಾಸ್ತ್ರವನ್ನು ಎಷ್ಟು ನಂಬಬೇಕು ಸಾರ್?*



ಭವಿಷ್ಯತ್ತು ಹಾಳಾಗದಷ್ಟು.

ಬೋ.ಪಾ. ವೆಂಕಟೇಶ್, ಹೊಸಕೋಟೆ
*ಬೇಕರಿ ಪದಾರ್ಥಗಳ ಮೇಲೆ ಬೆಳ್ಳಿಯ ಲೇಪನ ಮಾಡುವುದೇಕೆ?*
ಬೇಯದ ಅಥವಾ ಸುಟ್ಟಿರುವ ಭಾಗಗಳನ್ನು ಮರೆಮಾಚಲು.

ಮಹಾಲಿಂಗ ಗೋರಬಾಳ, ಮಾಣಿಕವಾಡಿ
*ಅರೆತಿಳುವಳಿಕೆ ಇರುವ ವ್ಯಕ್ತಿಯೊಂದಿಗೆ ಯಾವ ರೀತಿ ಇರಬೇಕು?*
ಸಂಗೀತ ಕಚೇರಿಯಲ್ಲಿರುವಂತೆ; ಹೇಳಿದ್ದು ಸರಿಯಿರಲಿ, ಬಿಡಲಿ; ಅರ್ಥವಾಗಲಿ, ಬಿಡಲಿ, ತಲೆದೂಗುತ್ತಿರಬೇಕು.

■ ರಾಮ್